ನವೆಂಬರ್ 2001	09
ಡಿಸೆಂಬರ್ 2001	07
	83

ದೊಡ್ಡಬಳ್ಳಾಪುರದಲ್ಲಿ ಅಗ್ನಿಶಾಮಕ ರಾಣೆ ತೆರೆಯುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 77(02)

ಸದಸ್ಯರ ಹೆಸರು ಶ್ರೀ ವಿ ಕೃಷ್ಣಪ್ಪ(ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ದೊಡ್ಡಬಳ್ಳಾವುರ ತಾಲ್ಲೂಕು ಕೈಗಾರಿಕಾ ವ್ರದೇಶವಾಗಿದ್ದು ನಗರದಲ್ಲಿ ನೇಕಾರರ ಮಗ್ಗಗಳೇ ಹೆಚ್ಚಾಗಿದ್ದು ಅಗ್ನಿ ಆನಾಹುತಗಳಾದಾಗ ನಂದಿಸಲು ''ಅಗ್ನಿಶಾಮಕ ರಾಣೆ'' ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಗ್ನಿಶಾಮಕ ರಾಣೆ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಇದರ ನಿಯಾಮಾವಳಿಗಳನ್ನು ನಮೂದಿಸುವುದು)

ಉತ್ತರ

ಅ) ಹೌದು

ಆ) ಸರ್ಕಾರದ ಆದೇಶ ಸಂಖ್ಯೆ ಒಇ 130 ಕಅಸೇ 95, ದಿನಾಂಕ 6-3-96ರಲ್ಲಿ ದೊಡ್ಡಬಳ್ಳಾವುರ ಪಟ್ಟಣದಲ್ಲಿ ಅಗ್ನಿಶಾಮಕ ರಾಣೆ ತೆರೆಯಲು ಮಂಜೂರಾತಿ ನೀಡಲಾಗಿದೆ ನೂಕ್ತ ನಿವೇಶನ ಅಥವಾ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ ತಾತ್ಕಾಲಿಕ ಕಟ್ಟಡಗಳು ಲಭ್ಯವಾದ ಕೂಡಲೇ ಅಗ್ನಿಶಾಮಕ ರಾಣೆಯನ್ನು ವ್ರಾರಂಭಿಸಲಾಗುವುದು

ತ್ವರಿತ ನ್ಯಾಯಾಲಯ ಸ್ಥಾಪನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 78(210)

ಸದಸ್ಯರ ಹೆಸರು ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ)

ಉತ್ತರಿಸುವ ಸಚಿವರು ಶ್ರೀ ಡಿ ಬಿ ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಪ್ರಶ್ನೆ

ಅ) ಕೇಂದ್ರ ಸರ್ಕಾರವು ಶೀಘ್ರ ವಿಲೇವಾರಿ ನ್ಯಾಯಾಲಯಗಳನ್ನು ಸ್ಥಾಪಿಸಿದಂತೆ ರಾಜ್ಯದಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅಂತಹ ಎಷ್ಟು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ? ಎಲ್ಲೆಲ್ಲಿ ಸ್ಥಾಪಿಸಲಾಗಿದೆ? ವಿವರ ನೀಡುವುದು

ಇ) ಇದಕ್ಕೆ ಕೇಂದ್ರ ಸರ್ಕಾರದ ಹಣವು ಬಿಡುಗಡೆ ಮಾಡಿದೆಯೇ? ಮಾಡಿದ್ದಲ್ಲಿ ಅದರ ಮೊತ್ತ ಎಷ್ಟು?

ಈ) ಇಂತಹ ನ್ಯಾಯಾಲಯಗಳಲ್ಲಿ ಇದುವರೆಗೂ ಇತ್ಯರ್ಥಪಡಿಸಿದ ಮೊಕದ್ದಮೆಗಳೆಷ್ಟು?

ಉತ್ತರ

ಅ) ಹೌದು

ಆ) 13 ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು ಅವುಗಳ ಪೈಕಿ 9 ನ್ಯಾಯಾಲಯಗಳು ಕರ್ತವ್ಯ ನಿರತವಾಗಿದ್ದು, ಇನ್ನುಳಿದ 4 ನ್ಯಾಯಾಲಯಗಳು ಸೂಕ್ತ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಮತ್ತು ಸ್ಥಳಾವಕಾಶ ದೊರೆಯದೇ ಇರುವುದರಿಂದ, ಕಾರ್ಯ ನಿರತವಾಗಿರುವುದಿಲ್ಲ

ಬೆಂಗಳೂರು ನಗರ	- 2
ಬೆಂಗಳೂರು ಗ್ರಾಮಾಂತರ	- 1
ಬೆಳಗಾಂ	- 1
ಬಳ್ಳಾರಿ	- 1

ಚಿತ್ರದುರ್ಗ	1
ದಾವಣಗೆರೆ -	1
ಧಾರವಾಡ -	1
ರಾಯಚೂರು -	1
	9

ಕರ್ತವ್ಯ ನಿರತವಾಗದೇ ಇರುವ ನ್ಯಾಯಾಲಯಗಳು.

ಗುಲ್ಬರ್ಗಾ	-	1
ಗದಗ	-	1
ಕೊಪ್ಪಳ	-	1
ಕೊಡಗು-ಮಡಕೇರಿ	-	1
		4

ಇ) ಹೌದು

2000-01ನೇ ಸಾಲಿಗೆ 543.38 ಲಕ್ಷ ರೂ.

2001-02ನೇ ಸಾಲಿಗೆ 543.36 ಲಕ್ಷ ರೂ.

ಒಟ್ಟು 1,086.74 ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲಾಗಿದೆ.

ಈ) ರಾಜ್ಯದಲ್ಲಿ ಫಾಸ್ಟ್ ಟ್ರಾಕ್ ನ್ಯಾಯಾಲಯಗಳು ದಿನಾಂಕ:11-8-2001ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ: 1-11-2001ಕ್ಕೆ 36 ಸೆಷನ್ಸ್ ಪ್ರಕರಣಗಳನ್ನು ಇತ್ಯರ್ಥಪಡಿಸಿದೆ.

ರಾಜ್ಯದಲ್ಲಿ ಪುರಸಭೆಯಿಂದ ನಗರಸಭೆಯಾಗಿ ಪರಿವರ್ತನೆಯಾಗಿರುವ ನಗರಸಭೆಗಳ ಕುರಿತು.